Reg No B G 155 25-2-1969

52 nd Year of Publication

SATYAVADI Daily, MYSORE 4

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಇದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ.

ಸ್ಥಾಪಕರು : ಆರಮನೆ ಶಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಸೆ.ಸ

ರೂ. 9 ಕೋಟಿ ಸಾಲ ಎತ್ತಲಾಗುವುದು

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ" ಯ ಸ್ವರ್ಣೋತ್ಸವವನ್ನು ಬೇಗನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಸೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯ ಮೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ಪೂರ್ವಕವಾಗಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ

ಸಂಪಾದಕ "ಸತ್ಯವಾದಿ"
ಚಾಮರಾಜಪುರಂ, ಮೈಸೂರು 4.

ಗಮನಾರ್ಹ ಇಳಿತಾಯ

ಕಪ್ಪಂಚಿನ ಸುಗ್ರೀವಾಜ್ಞೆ ಜಾರಿ ಆದಾರಭ್ಯ ಒಳ ಪೇಟೆಯಲ್ಲಿ ಬೆಳ್ಳಿ ಬೆಲೆ ಗಮನಾರ್ಹವಾಗಿ ಕುಸಿಯಿತೆಂದು ನವ ದೆಹಲಿ ವಾರ್ತೆ ತಿಳಿಸುತ್ತದೆ.

ಪಕ್ಷಗಳಿಗೆ ಕಾಣಿಕೆ

ಬಿರ್ಲಾ ಹಿಂಡುವ ಕಂಪನಿಗಳು 63ರಿಂದ 68 ರ 5 ವರ್ಷಗಳ ಕಾಲದಲ್ಲಿ ಕಾಂಗ್ರೆಸ್ ಸ್ವತಂತ್ರ ಪಾರ್ಟಿ ಮತ್ತು ವ್ಯಕ್ತಿಗಳಿಗೆ ನೆಲವತ್ತೊಂದು ಲಕ್ಷ ರೂಪಾಯಿಗಳ ಕಾಣಿಕೆಗಳನ್ನು ಕೊಟ್ಟಿರುವುದಾಗಿ ರಾಜ್ಯಸಭೆಯಲ್ಲಿ ತಿಳಿಸಲಾಯಿತು. ಈ ಪೈಕಿ ಕಾಂಗ್ರೆಸ್ ರೂ. 3825651, ಸ್ವತಂತ್ರಪಕ್ಷ ರೂ. 130271 ಮತ್ತು ವ್ಯಕ್ತಿಗಳು 1 ಲಕ್ಷದ 2 ಸಾವಿರ ಪಡೆದಿರುವರೆಂದು ತಿಳಿಸಲಾಯಿತು.

●

ಬಜೆಟ್

ಬೆಂಗಳೂರು— ಅರ್ಥ ಮಂತ್ರಿ ಶ್ರೀ ರಾಮಕೃಷ್ಣ ಹೆಗ್ಡೆಯವರು ನಿನ್ನೆ ವಿಧಾನ ಸಭೆಯಲ್ಲಿ ಬಜೆಟ್ ಮಂಡಿಸಿದರು — ರೂ. 13.22 ಕೋಟಿ ಹೆಚ್ಚಿಗಾ ಇದ್ದರೂ ಯಾವ ಹೊಸ ತೆರಿಗೆಯೂ ವಿಧಿಸಲಾಗಿಲ್ಲ — ತುಟ್ಟಿಭತ್ಯ ಇತ್ಯಾದಿ ವಿಷಯದಲ್ಲಿ ತುಕೋಳ್ ಕಮಿಷನ್ ವರದಿ ಸ್ವೀಕರಿಸಲಾಗಿದೆ.

★

ಪ್ರಧಾನರ ಸಲಹೆ

ಮಹಾಜನ ಆಯೋಗವನ್ನು ವರದಿ ಜಾರಿ ಮಾಡಬೇಕೆಂದು ಮೈಸೂರಿನ ಸಂಸತ್ ಸದಸ್ಯರು ಸನ್ನ ಮೆಹೆಲಿಯಲ್ಲಿ ಪ್ರಧಾನರಿಗೆ ಮನವಿ ಅರ್ಪಿಸಿದಾಗ ಮುಂದು ರಾಜ್ಯಗಳ ಸರ್ವ ಪಕ್ಷಗಳೂ ಕುಳಿತು ತೃಪ್ತಿಕರವಾದ ಸಮಾರ್ಗ ಕಂಡುಹಿಡಿಯಬೇಕೆಂದು, ಇದರಲ್ಲಿ ಭೇದವಾದ ಗಡಿಯನ್ನೆ ಪರಿಹಾರಕ್ಕೆ ಕಷ್ಟವಾಗುವುದೆಂದು ತಿಳಿಸಿರುವುದಾಗಿ ಗೊತ್ತಾಗಿದೆ.

○

ಆಹಾರ ಉತ್ಪಾದನೆ

ರಾಜ್ಯದಲ್ಲಿ ಈ ವರ್ಷದ ಆಹಾರ ಉತ್ಪಾದನೆ 44 ಲಕ್ಷ ಟನ್‌ಗಳೆಂದು ಅಂದಾಜು ಮಾಡಿರುವುದಾಗಿ ಬೆಂಗಳೂರು ವರದಿ ತಿಳಿಸುತ್ತದೆ.

ಕಾರ್ಯಕ್ರಮ ಕೈಗೊಳ್ಳುವ ಭರವಸೆ

ಅಶ್ಲೀಲ ನೃತ್ಯ ಮತ್ತು ಅಶ್ಲೀಲ ಜಲಚಿತ್ರ ಭಿತ್ತಿಪತ್ರ ಪ್ರದರ್ಶಿಸುವವರ ಮೇಲೆ ಸರ್ಕಾರದ ಗಮನಕ್ಕೆ ತಂದರೆ ಕಾರ್ಯಕ್ರಮ ಕೈಗೊಳ್ಳಲಾಗುವುದೆಂದು ವಿಧಾನಸರಿಷತ್ತಿನಲ್ಲಿ ತಿಳಿಸಲಾಯಿತು. ರಾತ್ರಿ 2 ಘಂಟೆ ಮೇಲೆ ಕೆಲವು ಹೋಟಲುಗಳಲ್ಲಿ ಅಶ್ಲೀಲ ನೃತ್ಯ ಏರ್ಪಾಡಿದೆ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ತಿಳಿಸಲಾಯಿತು.

★

ಸರ್ಕಾರದ ಅಭಿಪ್ರಾಯ

5 ನೇ ಹಣಕಾಸು ಆಯೋಗ ತನ್ನ ತೀರ್ಪನ್ನು ಕೊಡುವ ವರೆಗೆ, ಯೋಜನೆಗಾತ್ರದ ಅನಿಶ್ಚಯತೆ ವ್ಯವಸ್ಥೆಗೆ ಆಗುವವರೆಗೆ ಮತ್ತೊಂದು ವಾರ್ಷಿಕ ಯೋಜನೆ ಹೊಂದಿರುವುದು ಉತ್ತಮವೆಂದು ಮೈಸೂರು ಸರ್ಕಾರದ ಅಭಿಪ್ರಾಯವೆಂದು ಅಂದಾಜು ಪೆಟ್ಟಿ ಭಾಷಣದಲ್ಲಿ ಹಣಕಾಸು ಮಂತ್ರಿ ಶ್ರೀ ಬಿ. ರಾಮಕೃಷ್ಣ ಹೆಗ್ಡೆ ಅವರು ಸಲಹೆ ಇತ್ತಿರುವರು. ರಾಜ್ಯಕ್ಕೆ 69-70 ರಲ್ಲಿ ಒದಗಬಹುದಾದ ಕೆಲವು ಸೌಕರ್ಯಗಳನ್ನೆ ವಿವರಿಸಲಾಗಿದೆ.

○

ಕೇಂದ್ರಕ್ಕೆ ಬಾಕಿ

ರಾಜ್ಯ ಸರ್ಕಾರಗಳಿಂದ ಕೇಂದ್ರಕ್ಕೆ ಬಾಕಿ ಬರಬೇಕಾದ್ದು 5191 ಕೋಟಿ ಎಂಬುದಾಗಿ ನವ ದೆಹಲಿ ವಾರ್ತೆ.

ಸಾಲನೆತ್ತಲಾಗುವದು

ಎರಡು ಸಾಲಗಳನ್ನು ಪಾವತಿ ಮಾಡಬೇಕಾಗಿರುವದರಿಂದ ರೂ. 9 ಕೋಟಿ ಸಾಲವನ್ನೆತ್ತುವ ಕಾರ್ಯಕ್ರಮವನ್ನು ಮುಂದಿನ ಅಂದಾಜಪಟ್ಟಿಯಲ್ಲಿ ಶೃತಪಡಿಸಲಾಗಿದೆ.

★

ಇಂದಿನ ವಿದ್ಯಾ ಪದ್ಧತಿ

ಬೆಂಗಳೂರು— ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು, ಆಚಾರ್ಯ ಪಾಠಶಾಲಾ ಕಾಲೇಜಿನ ಪುರುಷರ ಹಾಸ್ಟಲ್ ಕಟ್ಟಡದ ಅಸ್ತಿಭಾರಶಿಲೆ ಸ್ಥಾಪಿಸುತ್ತಾ— ದೇಶದಲ್ಲಿನ ವಿದ್ಯಾಪದ್ಧತಿಯು, ಸಾತಂತ್ರ ಹಿಂದಿನ ಕಾಲದಂತೆಯೇ, ವಿದ್ಯಾರ್ಥಿಗಳನ್ನು ಸಾವಲಂಬನೆಗೊಳಿಸುವ ಬದಲು, ಕೆಲಸ ಪಡೆಯುವದಾಗಿದೆ, ಎಂದು ಹೇಳಿದರು.

★

ರಿಜಿಸ್ಟರ್ಡ್ ಮದುವೆ

ಮೈಸೂರು— ಕಾರ್ಮಿಕ ಮಂತ್ರಿ ಶ್ರೀ ಪುಟ್ಟಸ್ವಾಮಿಯವರು, ರಿಜಿಸ್ಟರ್ಡ್ ಮತ್ತು ಸ್ವಾಶ್ರಯ ಇಲಾಖಾ ನೌಕರರ ಸಂಘದ ಐದನೇ ಸಮ್ಮೇಳನವನ್ನು ಉದ್ಘಾಟಿಸುತ್ತಾ — ರಿಜಿಸ್ಟರ್ಡ್ ವಿವಾಹ ನೆರವೇರಿಸುವುದರಿಂದ ತಂದೆತಾಯಿಗಳಿಗೆ ಆರ್ಥಿಕ ಮತ್ತಿತರ ತೊಂದರೆಗಳು ತಪ್ಪುವುದೆಂದೂ, ಕುಟುಂಬ ಯೋಜನೆಗೂ ಸಹಾಯಕವಾಗುವುದೆಂದೂ ಹೇಳಿದರು.

ಗಾಂಧೀಜೀ — ನೂರು ವರ್ಷಗಳು

(ಕಾರ್ಲ್ ಜೆಸ್ಪರ್ಸ್ ಲೇಖನದಿಂದ)

ಗಾಂಧೀಜೀ ಭಾರತದ ಸ್ವಾತಂತ್ರ್ಯ ಶಿಲ್ಪಿ. ಸ್ವಾತಂತ್ರ್ಯ ಗಳಿಸಲು ಅವರೆಂದೂ ಸೈನ್ಯಬಲವನ್ನು ಉಪಯೋಗಿಸಲಿಲ್ಲ ಅಹಿಂಸೆಯ ಬಲದಿಂದಲೇ ಅದನ್ನು ಗಳಿಸಿಕೊಟ್ಟರು.

ಗಾಂಧೀಜಿಯವರಲ್ಲಿ ಅಸಾಧ್ಯವಾದುದನ್ನು ಸಾಧಿಸುವ ದೃಢ ನಿರ್ಧಾರವಿತ್ತು. ಅಹಿಂಸೆಯಿಂದಲೇ ರಾಜಕೀಯ ಧ್ಯೇಯವನ್ನು ಸಾಧಿಸುವ ಮಹತ್ಕಾರ್ಯಕ್ಕೆ ಅವರದು. ಈ ದಿಸೆಯಲ್ಲಿ ಅವರು ಬಹುಮಟ್ಟಿಗೆ ಯಶಸ್ವಿಯಾದರು.

ಗಾಂಧೀಜಿ ದೈಹಿಕ ಹಿಂಸೆಯನ್ನು ಸಹಿಸುತ್ತಿರಲಿಲ್ಲ. ಸ್ವಯಂ ಅನೇಕ ವರ್ಷಗಳಲ್ಲಿ ಸೆರೆಮನೆಗಳಿಂದಾಗಿ ಅವರು ಈ ದೈಹಿಕ ಯಾತನೆಯನ್ನು ಅನುಭವಿಸಿದ್ದರು. ಅವರ ಪ್ರಾಣಕ್ಕೆ ಅನೇಕ ಬಾರಿ ಅಪಾಯವೊದಗಿದ್ದಿತು. ಕೊನೆಗೆ ಅವರು ಹಂತಕನ ಗುಂಡಿಗೆ ಆಹುತಿಯಾದರು. ಅಂದಿನಿಂದ ಸರ್ವತ್ರ ಅಹಿಂಸೆಯೇ ಇರಬೇಕೆಂದು ಬಯಸಿದ್ದರು.

ಗಾಂಧೀಜಿಯವರ ರಾಜಕೀಯಕ್ಕೆ ಧರ್ಮವೇ ಆಧಾರವಿದ್ದಿತು. ಈ ಆಧಾರ ಅಂತಃ ಪ್ರೇರಣೆಯ ಮೂಲರೂಪ. ಇದೇ ಸತ್ಯಾಗ್ರಹ ಹಾಗೂ ಸತ್ಯ ಅನ್ವೇಷಣೆಯ ಮಾರ್ಗದರ್ಶಿ.

' ಸತ್ಯಾಗ್ರಹಿ ಯಾವಾಗಲೂ ಸತ್ಯನಿಷ್ಠನಾಗಿರಬೇಕು ; ಪವಿತ್ರನಾಗಿರಬೇಕು, ತ್ಯಾಗಶೀಲನಾಗಿರಬೇಕು " ಎಂದು ಗಾಂಧೀಜಿ ಹೇಳುತ್ತಿದ್ದರು.

ಗಾಂಧೀಜಿ ಎಂದರೆ ಭಾರತದ ಸಹಸ್ರಾರು ವರ್ಷಗಳ ನೆನಪು ಬರುತ್ತದೆ.

ಗಾಂಧೀಜಿ ತನ್ನನ್ನು ಸಂತ ಎಂದು ಕರೆಯಲು ಎಂದೂ ಒಪ್ಪಲಿಲ್ಲ. ಜನರು ತಮ್ಮ ' ವ್ಯಕ್ತಿ ಪೂಜೆ ' ಮಾಡದಂತೆ ವಿಶೇಷ ಗಮನ ನೀಡಿದರು.

ರಾಜಕೀಯವು ಧರ್ಮ ಹಾಗೂ ನೀತಿಗಳಿಂದ ಬೇರೆಯಲ್ಲವೆಂದು ಅವರು ಭಾವಿಸಿದ್ದರು. ಆತ್ಮದ ಸಾವಿತ್ರ್ಯವನ್ನು ಕಳೆದುಕೊಳ್ಳುವುದಕ್ಕಿಂತಲೂ ಇಡೀ ಸಾಯುವುದೇ ಲೇಸು ಎಂದು ಗಾಂಧೀಜಿ ಹೇಳುತ್ತಿದ್ದ.

' ಶ್ರೇಷ್ಠ ನುಚ್ಚಿದ ರಾಜಕೀಯದಿಂದ ಮಾತ್ರ ರಾಜಕೀಯ ವಿಪತ್ತುಗಳನ್ನು ಎದುರಿಸುವ ಸಾಮರ್ಥ್ಯ ಬರುತ್ತದೆ ' ಇದೇ ಅವರು ನೀಡಿದ ಉತ್ತರ ; ವಿಶ್ವನಾಶವನ್ನು ತಪ್ಪಿಸಬಲ್ಲ ಏಕೈಕ ಮಾರ್ಗ.

Golden Jubilee of 'Satyavadi'

The golden jubilee of the ' Satyavadi ' is to be celebrated very soon

The President, the Prime Minister, H H. the Maharaja of Mysore and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah. Sri Madhav Shenoi Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes

It iswelknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and grasing the occasion with presence, are fervently solicited with grateful thanks.

Editor, ' Satyavadi ' Chamarajapuram, Mysore; 4.



Protectthe Cow

ವುಡ್‌ಲ್ಯಾಂಡ್ಸ್ ಜಯಪ್ರದ 3ನೇ ವಾರ

.... ಮನಮೋಹಕ ಹಿಂದಿ ಚಿತ್ರ ....

ದಿವಾನ ★ DIWANA

ಹಾಸ್ಯಶಿಖಾಮಣಿ ರಾಜ್ ಕಪೂರ್, ಸೌಂದರ್ಯಖಾಣಿ ಸ್ವೈರಾಬಾನು ಅಭಿನಯಿಸಿ ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಚಿತ್ರ

ಸಂಗೀತ– ಶಂಕರ್ ಜೈಕಿಷನ್ ಡೈರೆಕ್ಷನ್– ಮಹೇಶ್ ಕೌಲ್

[ದಿನ 3 ಪ್ರದರ್ಶನಗಳು]

ಅಪೆರಾ— ಜನವರಿಯು 5 ನೇ ವಾರ

— ಅತ್ಯಮೋಘ ತಮಿಳು ಚಿತ್ರ —

ಒಳಿವಿಳಕ್ಕು

ಎಂ. ಜಿ. ರಾಮಚಂದ್ರನ್ ನಾಗೇಶ್ ಜಯಲಲಿತ

.... ದಿನವಹಿ 3 ಆಟಗಳು ....

Quality Printing — Neat Binding

Lakshminarasimha Press

Sivarampet, Mysore

SHAKTI

SUDHA

A Superb Tonic

Help The Gorakshana

ಅಶೋಕ ವಿಜೆನ್‌ಸೀನ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಬೆಂಗಳೂರು

ಎಲ್ಲ ವಿಧ ಲಯನ್ಸ್‌ಗಳ ಬಿಡಿಭಾಗಗಳನ್ನು ಕೈಗೆ ದೊರೆಯುವಂತೆ

Edited, Printed & Published by Dharmaprachara Niratha M S Krishna Rao (Proprietor) at the Satyavad Press Chamarajapuram, Mysoe 4